ಮಾಡಿದ್ದೀರಿ. ಆದ್ದರಿಂದ ಅವರ ಬಗ್ಗೆ ಒಂದು ಬೇಸಿಕ್ ಕ್ವಾಲಿಫಿಕೇಷನ್ ಪ್ರಿನ್ಸಿಪಲ್ ಇಟ್ಟುಕೊಂಡು ಪಿ. ಎಸ್. ಸಿ. ಯವರು ಅವರ ಒಂದು ನೀತಿಯನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಅವರು ಪ್ರಯತ್ನ ಮಾಡುತ್ತಾರೆಯೇ ?

Sri H. SIDDAVEERAPPA.—I do not think I can give any direction to the PSC in this behalf ; otherwise, they might say that we are offending Articles 15 and 16 of the Constitution. Mr. Lingappa knows about it. Therefore we cannot give any guidelines to the PSC. ಅವರಿಗೆ ನಾವು ಅಂತಹವರನ್ನೇ ತೆಗೆದುಕೊಳ್ಳಿ, ಇಂತಹವರನ್ನೇ ಬಿಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಪಿ.ಎಸ್.ಸಿ. ಯವರು ಆ ತಾರೀಖಿನಲ್ಲಿ ಬೇಸಿಕ್ ಕ್ವಾಲಿಫಿಕೇಷನ್ ಯಾರದು ಇರುತ್ತದೋ ಅಂತಹವರ ಅರ್ಜಿಗಳನ್ನು ಪರ್ಯಾಲೋಚನೆ ಮಾಡುತ್ತಾರೆ.

First Report of the Committee of Privileges—Presentation

Sri M. VEERAPPA MOILY (Karkal).—I beg to present the First Report of the Committee of Privileges.

MADAM SPEAKER.—Report is presented.

Taking up notices given under rule 312 without delay.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ನಿನ್ನೆ ನಾನು 3.2ನೇ ರೂಲು ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ಅದನ್ನು ಸಾಯಂಕಾಲ ನೋಡೋಣ.

ಶ್ರೀ ಬಿ. ವಿ. ಕಕ್ಕಿಲಾಯ.—ಉಡುಪಿಯ ಒಂದು ಬೀಡಿ ಫ್ಯಾಕ್ಟರಿಯಲ್ಲಿ ಮೂರು ಸಾವಿರ ಜನರಿಗೆ ಉದ್ಯೋಗವಿಲ್ಲ. ಪೋಲೀಸಿನವರು ರಾತ್ರಿ ಡಾರ್ಮಾಡಿದ್ದಾರೆ. ಹೆಣ್ಣುಮಕ್ಕಳನ್ನು ಹೊಡೆದಿದ್ದಾರೆ.

ಅಧ್ಯಕ್ಷರು—312ನೇ ರೂಲಿನ ಪ್ರಕಾರ ಕೊಟ್ಟಿರುವ ನೋಟೀಸನ್ನು ಸಾಯಂಕಾಲ ತೆಗೆದುಕೊಳ್ಳುತ್ತೇನೆಂದು ಮೊದಲೇ ಹೇಳಿದ್ದೇನೆ. ಆದ್ದರಿಂದ ಅದೀಗ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನೂ ಕೂಡ ಒಂದು ನೋಟೀಸನ್ನು 312ನೇ ರೂಲ್ ಪ್ರಕಾರ ಕಳುಹಿಸಿದ್ದೇನೆ.

ಅಧ್ಯಕ್ಷರು.—ಅದೇನಿದ್ದರೂ ಅದನ್ನು ಸಾಯಂಕಾಲವೇ ತೆಗೆದುಕೊಳ್ಳಬೇಕು. ಅದು ಒಂದು ಗಂಟೆಯಲ್ಲಿ ಬಂದಿದೆ. ಅದನ್ನು ಕಾಲ್ ಅಟೆನ್‌ಷನ್ ನೋಟಿಸ್ ಆಗಿ ಪರಿವರ್ತನೆ ಮಾಡಿದೆ. ಆದನ್ನು ಆಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಕಾಲ್ ಅಟೆನ್‌ಷನ್ ನೋಟೀಸ್ ಆದರೂ ಕೂಡ ಕೂಡಲೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು —ಇದು ನನಗೆ ಗೊತ್ತು. ಈಗ ಇದನ್ನು 1 ಗಂಟೆ 55 ನಿಮಿಷಕ್ಕೆ ಕೊಟ್ಟಿದ್ದು, ಇದು ಬಹಳ ಆರ್ಜೆಂಟ್, ತೆಗೆದುಕೊಳ್ಳಬೇಕೆಂದರೆ, ಅದಕ್ಕೇನಾದರೂ ರೂಲ್ಸ್ ಇಲ್ಲವೇ ? ಅದನ್ನು ಈಗ ನಾನು ಸರ್ಕಾರಕ್ಕೆ ಕಳುಹಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಡವಾಡದೇ ಸರ್ಕಾರ ಅದಕ್ಕೆ ಉತ್ತರ ಕಳುಹಿಸಬೇಕೆಂದು ತಾವು ಅವರಿಗೆ ಹೇಳಬೇಕು.

ಅಧ್ಯಕ್ಷರು.—ತಡ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ನಾನೂ ಕೂಡ ನಿನ್ನೆಯ ದಿವಸ 312ನೇ ರೂಲ್ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೇನೆ. ಗೊಬ್ಬರದ ಹಂಚಿಕೆಯಲ್ಲಿ ಬಹಳ ಅನ್ಯಾಯವಾಗಿದೆ.